2 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ
ಸಾಃ ಗೋಕಾಕ

ಸಿಸಿ ನಂಬರಃ 2273/2017

ನಾನು , ರೂಪಾ ಮಟ್ಟಿ
ಬಿ.ಎಸ್ ಸಿ., ಎಲ್‌ಎಲ್.ಎಮ್.,
2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ಗೋಕಾಕ

ಆರೋಪಿತನ ಹೆಸರು : 1) ಬಸವಣ್ಣಿ ಭೀಮಪ್ಪ ಬೀಜನಾಯಕ
ವಯಸ್ಸುಃ 45 ವರ್ಷ,
ಸಾಃ ರಾಜಕಟ್ಟಿ, ತಾಃ ಹುಕ್ಕೇರಿ.

ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ ಏನೆಂದರೆ,

ದಿಃ 03-01-2017 ರಂದು ರಾತ್ರಿ 8-30 ಗಂಟೆಗೆ ಸುಮಾರಿಗೆ ಗೋಕಾಕ ತಾಲೂಕಿನ ಗುಜನಾಳ ಗ್ರಾಮದ ಹಿಂಬದಿಯ ಗುಡ್ಡಗಾಡು ಪ್ರದೇಶದಲ್ಲಿ ಆರೋಪಿತನಾದ ನೀನು ನಿನ್ನ ಸ್ವಂತ ಲಾಭಕ್ಕಾಗಿ ಸರಕಾರದ ಯಾವುದೇ ಅನುಮತಿ, ಪರವಾನಿಗೆ ಇಲ್ಲದೆ ಬೇಕಾಯ್ದೆಶೀರ ರೀತಿಯಿಂದ ಅಕ್ರಮವಾಗಿ ಕಳ್ಳಭಟ್ಟಿ ಸರಾಯಿಯನ್ನು ಒಂದು ಚೀಲದಲ್ಲಿ ಕಳ್ಳಭಟ್ಟಿ ಸರಾಯಿ ಹೊಂದಿದ ಒಂದು ರಬ್ಬರ ಟ್ಯೂಬದಲ್ಲಿ ಸುಮಾರು 20 ಲೀಟರನಷ್ಟು ಕಳ್ಳಭಟ್ಟಿ ಸರಾಯಿಯನ್ನು ಸಾಗಾಟ ಮಾಡುತ್ತಿದ್ದಾಗ ಸಿಕ್ಕ ಅಪರಾಧ ಕಲಂ 32 ಕೆ ಇ ಕಾಯ್ದೆ ಅಡಿ ಅಪರಾಧ ಮಾಡಿರುವಿರಿ.

ಎರಡನೇಯದಾಗಿ, ಮೇಲೆ ಹೇಳಿದ ಸ್ಥಳ ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ಮೇಲೆ ಹೇಳಿದ ಮಧ್ಯವನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು ಸರ್ಕಾರದ ಯಾವುದೇ ಅನುಮತಿ, ಪರವಾನಗಿ ಇಲ್ಲದೇ ನಿನ್ನ ವಶದಲ್ಲಿಟ್ಟುಕೊಂಡು ಕಲಂ.38(ಎ) ಕರ್ನಾಟಕ ಅಬಕಾರಿ ಕಾಯ್ದೆ ರಡಿಯಲ್ಲಿ ಅಪರಾಧವನ್ನು ಮಾಡಿರುವಿರಿ.

ಕೊನೆಯದಾಗಿ, ಮೇಲೆ ಹೇಳಿದ ಸ್ಥಳ ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ಮೇಲೆ ಹೇಳಿದ ಮಧ್ಯವನ್ನು ಸೇವಿಸಿದರೆ ಅದು ಮನುಷ್ಯನ ಪ್ರಾಣಕ್ಕೆ ಹಾನಿಕರ ಅಂತಾ ಗೊತ್ತಿದ್ದರೂ ಅಕ್ರಮವಾಗಿ ಮೇಲೆ ಹೇಳಿದ ಕಳ್ಳಭಟ್ಟಿ ಸರಾಯಿಯನ್ನು ನಿನ್ನ ವಶದಲ್ಲಿ ಇಟ್ಟುಕೊಂಡು ಅಪರಾಧ ಕಲಂ 273 ಐಪಿಸಿ ಅಡಿ ಅಪರಾಧ ಮಾಡಿರುವಿರಿ.

( ಸದರಿ ಅಪರಾಧಗಳು ಇದೇ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದರಿಂದ ಅವು ನನ್ನಿಂದ ವಿಚಾರಣೆ ಆಗುತ್ತವೆ ಎಂದು ತಿಳಿಯಬಯಸುತ್ತೇನೆ.)

ಪ್ರಃ 1  ನಿನಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉಃ

ಪ್ರಃ 2  ನೀನು ಗುನ್ನಾ ಕಬೂಲಿ ಆಗುವಿರೋ ಅಥವಾ ವಿಚಾರಣೆ ಆಗಬೇಕೋ?

ಉಃ

(ಮೇಲಿನ ಆಪಾದನೆಯನ್ನು ಆರೋಪಿತರಿಗೆ ಓದಿ ಹೇಳಿ ಅವರಿಂದ ಬಂದ ಉತ್ತರಗಳನ್ನು ನನ್ನ ಸ್ವಅಕ್ಷರಗಳಲ್ಲಿ ಬರಕೊಂಡೆ ಅಂತಾ ದೃಢೀಕರಿಸುತ್ತೇನೆ)

ಸ್ಥಳಃ ಗೋಕಾಕ
ದಿಃ 29-09-2022                                    2 ನೇ ಹೆ.ದಿ.ನ್ಯಾ.ದಂ.,ಗೋಕಾಕ.